ಯಾವ ಯಾವ ಸೊಸೈಟಿಗಳು ಭಾಗವಹಿಸಿದ್ದವು. ಎಂಬ ಬಗ್ಗೆ ನಿಮ್ಮ ಹತ್ತಿರ ವಿವರಗಳು ಇದ್ದರೆ ಅದನ್ನು ಕೊಡಿ.

ಶ್ರೀ ಜೆ ಎಸ್. ದೇಶ್‌ಮುಖ್.—ವಿವರಗಳು ನನ್ನ ಹತ್ತಿರ ಇಲ್ಲ. ಅದನ್ನು ತರಿಸಿ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈ ಪ್ರಶ್ನೆಯನ್ನು ಮತ್ತೆ ಸೋಮವಾರ ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಖಾರ್ಗೆಯವರೇ ಈಗ ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ಎನ್. ನಾಯಕ್.—ಯಾವ ಯಾವ ವಿಷಯದ ಮೇಲೆ ಉತ್ತರವನ್ನು ತರಿಸಬೇಕಂ ಎಂಬುದನ್ನು ಮಾನ್ಯ ಮಂತ್ರಿಯವರಿಗೆ ತಿಳಿಸಬೇಕು ಅಧ್ಯಕ್ಷರೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆಯನ್ನು ಸೋಮವಾರ ತೆಗೆದುಕೊಳ್ಳಿ.

ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ತೀಕರಣ

೬೮ (೨೪೫) (ಡಿ) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ರಾಜ್ಯದಲ್ಲಿ ೧೯೮೫–೮೬ ಮತ್ತು ೧೯೮೬–೮೭ನೇ ಸಾಲಿನಲ್ಲಿ ವಿದ್ಯುತ್ ಒದಗಿಸಲಾದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ? (ಜಿಲ್ಲಾವಾರು ಅಂಕಿ ನೀಡುವುದು)

(ಆ) ವಿಶೇಷ ಘಟಕ ಯೋಜನೆಯಡಿಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಮಾಡಿದ ಖರ್ಚಿಷ್ಟು?

(ಇ) ಗುರುಮಿಠಕಲ್ ಕ್ಷೇತ್ರದಲ್ಲಿ ವಿದ್ಯುತ್ ಒದಗಿಸಲಾದ ಒಟ್ಟು ನೀರಾವರಿ ಪಂಪುಸೆಟ್ಟುಗಳೆಷ್ಟು ಮತ್ತು ಅದಕ್ಕೆ ತಗುಲಿದ ವೆಚ್ಚವೆಷ್ಟು?

ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಸಚಿವರು).—

(ಅ) ಉತ್ತರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

(ಆ)

ವರ್ಷ	ಖರ್ಚು ಮಾಡಿದ ಒಟ್ಟು ಮೊತ್ತ
	(ರೂ. ಕೋಟಿಗಳಲ್ಲಿ)
೧೯೮೫–೮೬	೨೫.೮೮
೧೯೮೬–೮೭ (ನಾಲ್ಕು ತಿಂಗಳುಗಳಿಗೆ)	೧೩.೦೯

(ಇ)

ವರ್ಷ	ವಿದ್ಯುತ್ ಪಡೆದ ನೀರಾವರಿ ಪಂಪ್ ಸೆಟ್‌ಗಳ ಸಂಖ್ಯೆ :	ಖರ್ಚಾದ ಮೊತ್ತ ರೂ.
೧೯೮೫–೮೬	೩೮	೮,೬೮,೦೦೦
೧೯೮೬–೮೭ (ನಾಲ್ಕು ತಿಂಗಳುಗಳಿಗೆ)	೨೪	೫,೩೨,೦೦೦

ಪಂಪ್‌ಸೆಟ್‌ಗಳ ಒಟ್ಟು ಮೊತ್ತ : ೪೪೨

ಅನುಬಂಧ

ರಾಜ್ಯದಲ್ಲಿ ಜಿಲ್ಲಾವಾರು ೧೯೮೫-೮೬ನೇ ಸಾಲು ಮತ್ತು ೧೯೮೬-೮೭ನೇ ಸಾಲಿನ ಮೊದಲ ನಾಲ್ಕು ತಿಂಗಳುಗಳಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಿದ ವರದಿ.

ಕ್ರಮ ಸಂಖ್ಯೆ	ಜಿಲ್ಲೆ	೧೯೮೫-೮೬ ರಲ್ಲಿನ ಪ್ರಗತಿ	೧೯೮೬-೮೭ ರಲ್ಲಿನ ಪ್ರಗತಿ (೧-೪-೧೯೮೬ ರಿಂದ ೩೧-೭-೧೯೮೬ ರವರೆಗೆ)
೧	ಬೆಂಗಳೂರು	೪೨೫೮	೧೩೨೭
೨	ಬೆಳಗಾಂ	೬೮೧೨	೧೪೩೯ ಹುಕ್ಕೇರಿ ತಾಲ್ಲೂಕು ಸೇರಿ
೩	ಬಳ್ಳಾರಿ	೧೮೬೭	೪೩೬
೪	ಬಿದರೆ	೧೨೬೦	೪೮೫
೫	ಬಿಜಾಪುರ	೬೩೬೩	೧೮೫೭
೬	ಚಿಕ್ಕಮಗಳೂರು	೫೦೬	೧೩೫
೭	ಚಿತ್ರದುರ್ಗ	೨೮೬೭	೮೭೫
೮	ಕೊಡಗು	೧೧೦	೨೯
೯	ಧಾರವಾಡ	೨೭೮೩	೬೯೭
೧೦	ಗುಲ್ಬರ್ಗ	೧೪೯೦	೫೧೨
೧೧	ಹಾಸನ	೭೧೮	೨೦೨
೧೨	ಕೋಲಾರ	೪೯೭೦	೧೭೦೫
೧೩	ಮಂಡ್ಯ	೭೬೦	೨೨೮
೧೪	ಮೈಸೂರು	೧೭೫೨	೯೧೦
೧೫	ಉತ್ತರ ಕನ್ನಡ	೧೩೨೦	೨೯೨
೧೬	ರಾಯಚೂರು	೨೫೨೯	೭೦೮
೧೭	ಶಿವಮೊಗ್ಗ	೧೦೮೪	೨೯೮
೧೮	ದಕ್ಷಿಣ ಕನ್ನಡ	೨೫೯೮	೭೩೯
೧೯	ತುಮಕೂರು	೪೩೨೦	೧೩೦೮
	ಒಟ್ಟು	೪೮,೩೩೭	೧೩,೪೮೨

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ, ಮಾನ್ಯ ಸಚಿವರು, ೧೯೮೫-೮೬ರಲ್ಲಿ ೪೮,೩೩೭ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ ಹಾಗೂ ೧೯೮೬-೮೭ ವರ್ಷದ ೪ ತಿಂಗಳಲ್ಲಿ ೧೩,೪೮೨ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ೧೯೮೫-೮೬ರಲ್ಲಿ ಒದಗಿಸಲಾದ ೪೮,೩೩೭ ಪಂಪು ಸೆಟ್ಟುಗಳಿಗೆ ೨೫.೮೮ ಕೋಟಿ ರೂಪಾಯಿಗಳು ಖರ್ಚಾಗಿದೆಯೆಂದೂ, ೧೯೮೬-೮೭ರಲ್ಲಿ ೧೩,೪೮೨ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಒದಗಿಸಲು ೧೩.೧೯ ಕೋಟಿ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದ್ದಾರೆ. ನಾನು ಕೇಳಿರುವ 'ಬಿ' ಪ್ರಶ್ನೆಯಲ್ಲಿ ಸ್ಪೆಷಲ್ ಕಾಂಪೋನೆಂಟಿನಿಂದ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಮಾಡಿದ ಖರ್ಚೆಷ್ಟು ಎಂದು ಕೇಳಿದ್ದೇನೆ. ಸ್ಪೆಷಲ್ ಕಾಂಪೋನೆಂಟಿನಿಂದ ಈ ಬಾಬಿಗಾಗಿ ಖರ್ಚು ಮಾಡಿರುವ ಹಣವೆಷ್ಟು ಎಂಬ ಅಂಕಿ ಅಂಶಗಳು ನನಗೆ ಬೇಕು.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಒದಗಿಸುವುದಕ್ಕೆ ಸ್ಪೆಷಲ್ ಕಾಂಪೋನೆಂಟ್ ಸ್ಕೀಂ ಎಂದು ಏನೂ ಇಲ್ಲ. ಆದರಿಂದ ಹಣ ಏನೂ ಬರುವುದಿಲ್ಲ. ೧೯೮೬-೮೭ರಲ್ಲಿ ಒಟ್ಟು ೧೩,೪೮೨ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಒದಗಿಸಿಕೊಡಲಾಗಿದೆ ಇದರಲ್ಲಿ ೨,೨೦೦ ಜನ ಅನುಸೂಚಿತ ಜಾತಿಯವರಿಗೆ ವಿದ್ಯುತ್‌ನ್ನು ಒದಗಿಸಿಕೊಡಲಾಗಿದೆ. ಇತರೇ ಹಿಂದುಳಿದ ಜಾತಿಯವರಿಗೆ ೫೫೭ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಒದಗಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ ? ನೀವು ಈ ಅನುಸೂಚಿತ ಜಾತಿಯವರಿಗಾಗಿ ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಟ್ಟಿದ್ದೀರಿ ಅದಕ್ಕೆ ತಗಲಿರುವ ಖರ್ಚೆಷ್ಟು ?

ಶ್ರೀ ಜೆ.ಹೆಚ್. ಪಟೇಲ್.—ಅದಕ್ಕೆ ಯೂನಿಫಾರಂ ಆಗಿ ಹಣ ಖರ್ಚಾಗುವುದಿಲ್ಲ. ಒಂದು ಪಂಪುಸೆಟ್ಟಿಗೆ ೨ ಕಂಬ ಬೀಳಬಹುದು, ಇನ್ನೊಂದು ಪಂಪು ಸೆಟ್ಟಿಗೆ ೨೦ ರಿಂದ ೩೦ ಕಂಬ ಬೀಳಬಹುದು. ಒಂದೊಂದು ಪಂಪುಸೆಟ್ಟಿಗೆ ಒಂದೊಂದು ತರಹ ಖರ್ಚು ಬರುತ್ತದೆ. ಆದ್ದರಿಂದ ಒಂದು ಪಂಪು ಸೆಟ್ಟಿಗೆ ವಿದ್ಯುತ್‌ನ್ನು ಒದಗಿಸಲು ಇಷ್ಟೇ ಖರ್ಚು ಬರುತ್ತದೆಂದು ಬೇಳುವುದಕ್ಕಾಗುವುದಿಲ್ಲ. ವಿದ್ಯುತ್ ಕೊಟ್ಟಿರುವ ಪಂಪ್‌ಸೆಟ್ಟುಗಳ ಸಂಖ್ಯೆ ನನಗೆ ಗೊತ್ತಿದೆ. ಪಂಪ್ ಸೆಟ್ ಒಂದಕ್ಕೆ ಎಷ್ಟು ಖರ್ಚು ಆಗಿದೆ ಎಂದು ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ಎಂ. ಎಸ್. ಕೃಷ್ಣನ್‌ರವರು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ.. ...

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ನಿಮಗೆ ನಾಲ್ಕು ಸಾರಿ ಸಪ್ಲಿಮೆಂಟರಿ ಕೇಳಲು ಅವಕಾಶವನ್ನು ಕೊಟ್ಟಿದ್ದೇನೆ. ಇನ್ನೂ ಎಷ್ಟು ಸಾರಿ ಅವಕಾಶ ಕೊಡಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಆ ಪ್ರಶ್ನೆಯಲ್ಲಿ ಇನ್ನೂ ಕೇಳುವುದಿದೆ.

ಅಧ್ಯಕ್ಷರು.—ತಾವುಗಳು ಮಂತ್ರಿಗಳಾಗಿದ್ದಾಗ ಹೀಗೆ ಮಾಡುತ್ತಿದ್ದೀರಾ ? ಒಬ್ಬೊಬ್ಬರು ೧೦-೧೦ ಪ್ರಶ್ನೆಗಳನ್ನು ಕೇಳಿದಾಗ ಉತ್ತರವನ್ನು ಕೊಡುತ್ತಾ ಇದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಮಂತ್ರಿಯಾಗಿದ್ದಾಗ ತಾವುಗಳು ಕೂಡ ಮಂತ್ರಿಯಾಗಿ ಇದ್ದೀರಿ. ತಮಗೆ ನನ್ನ ವಿಚಾರದಲ್ಲಿ ಗೊತ್ತಿದೆ.

ಅಧ್ಯಕ್ಷರು.—ಈಗ ತಮಗೆ ಅವಕಾಶ ಸಾಧ್ಯವಿಲ್ಲ. ನಾಲ್ಕು ಭಾಗಿ ಅವಕಾಶವನ್ನು ಕೊಟ್ಟಿದ್ದೇನೆ. ಎಂ. ಎಸ್. ಕೃಷ್ಣನ್‌ರವರು ತಮ್ಮ ಪ್ರಶ್ನೆಯನ್ನು ಕೇಳಿ....

ರೈತರು ಸಾಗುವಳಿ ಮಾಡಿರುವ ಜಮೀನಿನಲ್ಲಿ ನೀಲಗಿರಿ ಮರ ಬೆಳೆಸುವುದು

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿ ನಗರ).— ಮಾನ್ಯ ಅರಣ್ಯ,ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರೈತರು ಸಾಗುವಳಿ ಮಾಡಿರುವ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಬಲವಂತದಿಂದ ನೀಲಗಿರಿ ಗಿಡಗಳನ್ನು ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಚಿಕ್ಕಮಗಳೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ರೈತರು ಸಾಗುವಳಿ ಮಾಡಿರುವ ಭೂಮಿಯಲ್ಲಿ ನೀಲಗಿರಿ ಗಿಡಗಳನ್ನು ನೆಡುವುದನ್ನು ರೈತರು ಪ್ರತಿಭಟಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ರೈತರು ಸಾಗುವಳಿ ಮಾಡಿರುವ ಮತ್ತು ಪಸತಿಯಾಗಿರುವ ಸ್ಥಳಗಳಲ್ಲಿ ನೀಲಗಿರಿ ಗಿಡ ನೆಡುವುದನ್ನು ತಡೆಯಲು ಹಾಗೂ ಅಂತಹ ಜಾಗಗಳನ್ನು ಆಯಾ ರೈತರಿಗೆ ನೀಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ನನ್ನ ಪ್ರಶ್ನೆ ಒಂದಕ್ಕೆ ಉತ್ತರ ಇಲ್ಲ ಇನ್ನೊಂದಕ್ಕೆ ಉದ್ಭವಿಸುವುದಿಲ್ಲ ಎಂದು ಹೇಳಿ ಬಿಟ್ಟರೆ, ಹೇಗೆ ? ಸ್ವಾಮಿ ನಾನು ಸರಕಾರಕ್ಕೆ ಈ ಬಗ್ಗೆ ಬರೆದಿದ್ದೇನೆ, ಒತ್ತಾಯ ಮಾಡಿ ನೀಲಗಿರಿ ಮರಗಳನ್ನು ಹಾಕ ಬೇಕೆಂದು ಇವರು ಹೇಳುತ್ತಿದ್ದಾರೆ ಎಂದು ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಕಡೆಗಳಿಂದ ನಮ್ಮ ರೈತ ಸಂಘದವರು, ಪಾರ್ಟಿಯವರು